# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಸಿ.ಸಿ. 2363/2021

| | | | | |
|---|---|---|---|---|
| 01 | ಹೆಸರು | ಕುಮಾರ | ಸಿ ಡಬ್ಲೂ | **4** |
| 02 | ತಂದೆಯ ಹೆಸರು | ಶಿವಲಿಂಗೇಗೌಡ | ಪಿಡಬ್ಲೂ | 6 |
| 03 | ವಯಸ್ಸು | 42 | ಪ್ರಮಾಣೀಕರಿಸಲಾದ ದಿನಾಂಕಃ | |
| 04 | ಉದ್ಯೋಗ | ವ್ಯವಸಾಯ | 04.11.2025 | |
| 05 | ಊರು | ಯಾಚನಹಳ್ಳಿ ಗ್ರಾಮ | | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾ ಸಾ 1 ರಿಂದ 3 ಮತ್ತು 5 ರಿಂದ 7 ರವರ ಪರಿಚಯ ಇರುತ್ತದೆ. ನನಗೆ ಆರೋಪಿತಳ ಪರಿಚಯ ಇರುತ್ತದೆ.

3 ವರ್ಷಗಳ ಹಿಂದೆ ಯಾಚನಹಳ್ಳಿ ಗ್ರಾಮದಲ್ಲಿ ಚಾ ಸಾ 1 ಮತ್ತು ಆರೋಪಿಯ ನಡುವೆ ಬೆಳಗಿನ ಜಾವ ಗಲಾಟೆ ಆಗಿರುತ್ತದೆ. ನನಗೆ ಗಲಾಟೆಯಾದ ದಿನಾಂಕ ಮತ್ತು ಸಮಯ ನೆನಪಿಲ್ಲ. 2021 ರಲ್ಲಿ ಸದರಿ ಗಲಾಟೆ ಆಗಿರುತ್ತದೆ. ನಾನು ಚಾ ಸಾ 1 ರವರ ಮನೆಯ ಪಕ್ಕದ ಬೀದಿಯಲ್ಲಿ ವಾಸವಿದ್ದೇನೆ. ನಾನು ಅಂಗಡಿಗೆ ಹೋಗುತ್ತಿದ್ದಾಗ ಚಾ ಸಾ 1 ರವರಿಗೆ ಆರೋಪಿಯು ದೊಣ್ಣೆಯಿಂದ ಅವರ ಎದೆಗೆ ಹಲ್ಲೆ ಮಾಡುತ್ತಿರುವುದನ್ನು ನಾನು ಕಣ್ಣಾರೆ ನೋಡುತ್ತಿರುತ್ತೇನೆ. ನಂತರ ಚಾ ಸಾ 1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು ಬನ್ನೂರು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು ಅದರಂತೆ ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು. ಮಾ. 1 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಎ ಪಿ ಪಿ ರವರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ದಿಃ10.06.2021 ರಂದು ಬೆಳಗ್ಗೆ 11.00 ಗಂಟೆಗೆ ಸದರಿ ಜಗಳ ಆಗಿರುತ್ತದೆ ಎಂದರೆ ಸರಿ. ಸದರಿ ಜಗಳವು ಚಾ ಸಾ 1 ರವರ ಮನೆಯ ಮುಂದೆ ಸಾರ್ವಜನಿಕ ರಸ್ತೆಯಲ್ಲಾಗಿರುತ್ತದೆ ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿಯು ಚಾ ಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿ. ಆರೋಪಿಯು ಚಾ ಸಾ 1 ರವರ ಬಲ ತೊಡೆಗೆ ಮತ್ತು ಬಲತೋಳಿಗೂ ಕೂಡಾ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾ ಸಾ 2 ರವರು ಹೋಗಿ ಜಗಳ ಬಿಡಿಸಿರುತ್ತೇವೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಬಿ ಎಸ್ ವಕೀಲರಿಂದಃ**

ಗಲಾಟೆ ಆದ ಸಂದರ್ಭದಲ್ಲಿ 20–25 ಜನ ಊರಿನವರು ಸೇರಿರುತ್ತಾರೆ. ಅವರ ಹೆಸರುಗಳು ಕೆಂಪೇಗೌಡ, ದಿನೇಶ್ ಮತ್ತು ಕೆಂಪಾರಮ್ಮ ಇರುತ್ತದೆ ಮತ್ತು ಅಕ್ಕಪಕ್ಕದ ಮನೆಯವರು ಕೂಡಾ ಅಲ್ಲಿ ಸೇರಿದ್ದರು. ಮನೆಯ ವಿಚಾರಕ್ಕೆ ಸಂಬಂಧಿಸಿದಂತೆ ಚಾ ಸಾ 1 ಮತ್ತು ಆರೋಪಿಯ ನಡುವೆ ಸಣ್ಣ ಪುಟ್ಟ ಜಗಳವಾಗಿರುತ್ತದೆ. ಜಗಳವಾದಾಗ ನಾನು ನನ್ನ ಮನೆಯಿಂದ ಆರೋಪಿಯ ಮನೆ ಬಳಿ ಇರುವ ಚಿಲ್ಲರೆ ಅಂಗಡಿಗೆ ಹೋಗುತ್ತಿದ್ದೆ. ನಾನು ಹೇಳುವಂತೆ ಅಲ್ಲಿ ಯಾವುದೇ ಚಿಲ್ಲರೆ ಅಂಗಡಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ಕಣ್ಣಾರೆ ನೋಡದಿದ್ದರೂ ಸಹ ಚಾ ಸಾ 1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಘಟನೆ ಆದ ದಿನದಂದೇ ಚಾ ಸಾ 1 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುವುದಾಗಿ ನನ್ನ ಬಳಿ ಹೇಳಿರುತ್ತಾರೆ. ಚಾ ಸಾ 1 ರವರಿಗೆ ಆರೋಪಿ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಚಾ ಸಾ 1 ರವರ ವಿರುದ್ಧ ಕೊಟ್ಟ ದೂರಿಗೆ ವಿರುದ್ಧವಾಗಿ ಚಾ ಸಾ 1 ರವರು ಆರೋಪಿಯ ವಿರುದ್ಧ ಸುಳ್ಳು ದೂರು ದಾಖಲಿಸಿದ್ದು ಅದಕ್ಕೆ ಪೂರಕವಾಗುವಂತೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.